# ಹೊಳೆನರಸೀಪುರದ ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ.

## ಸಿ.ಸಿ.ನಂಃ 758/2018

| | | |
|---|---|---|
| **ಸಾಕ್ಷಿಯ ಹೆಸರು** | ಃ ರವಿಗೌಡ | **ಸಿ.ಡಬ್ಲ್ಯೂ ಃ 1** |
| **ತಂದೆ ಹೆಸರು** | ಃ ಮಂಜೇಗೌಡ | **ಪಿ.ಡಬ್ಲ್ಯೂ ಃ 1** |
| **ವಯಸ್ಸು** | ಃ **31** ವರ್ಷ | **ಪ್ರಮಾಣೀಕರಿಸಿದ ದಿಃ 18/11/2023** |
| **ವೃತ್ತಿ** | ಃ ಪೊಲೀಸ್ ಪೇದೆ 14 | |
| **ವಾಸ** | ಃ ಕೆರೆಕೋಡಿ | |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ ಯವರಿಂದ**

ದಿಃ **18.03.2018** ರಿಂದ **20.06.2023** ರವರೆಗೂ ಹಳ್ಳಿಮೈಸೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆನು.

ದಿಃ **19.06.2018** ರಂದು ಮಧ್ಯಾಹ್ನ **2** ಗಂಟೆಗೆ ನನ್ನನ್ನು ಮತ್ತು ಚಾ.ಸಾ **2** ರವರನ್ನು ನಮ್ಮ ಉಪನಿರೀಕ್ಷಕರಾದ ನಾಗಮ್ಮ ರವರು ಕಿಟ್ ಅನ್ನು ತರಲು ಹಾಸನಕ್ಕೆ ನಿಯೋಜಿಸಿದ್ದರು. ನಾವು ಸಂಜೆ **7.30** ರ ಸುಮಾರಿಗೆ ಹೊಳೆನರಸೀಪುರ ಬಸ್ ನಿಲ್ದಾಣದ ಮೈಸೂರು ಘಟಕಕ್ಕೆ ಬಂದು ಇಳಿದೆವು. ಕಿಟ್ ಗಳು ಹೆಚ್ಚಿದ್ದ ಕಾರಣ ಹಳ್ಳಿಮೈಸೂರು ಠಾಣೆಗೆ ಅವುಗಳನ್ನು ರವಾನಿಸಬೇಕಾಗಿದ್ದರಿಂದ ಆಟೋ ಕೇಳಲೆಂದು ನಾನು ಹೋದೆನು. ಆಟೋ ಸ್ಟ್ಯಾಂಡಿನಲ್ಲೆ ಆಸಾಮಿಯೊಬ್ಬನು ಬಂದು ತಾನು ಅಂಬೇಡ್ಕರ್ ನಗರದ ಮಂಜ ಎಂದು ಗುರುತಿಸಿಕೊಂಡು ಏಕಾಏಕಿ ನನ್ನ ಸಮವಸ್ತ್ರವನ್ನು ಹಿಡಿದು ಎಳೆದಾಡಿ ನನ್ನ ಬಲಕಪಾಳಕ್ಕೆ ಹೊಡೆದಿರುತ್ತಾನೆ. ಹಾಗೆಯೇ ನನ್ನನ್ನ ತಳ್ಳಿ ಕೆಳಕ್ಕೆ ನೂಕಿರುತ್ತಾನೆ. ಆಗ ಅಲ್ಲಿದ್ದಂತಹ ಆಟೋ ಚಾಲಕರು ಹಾಗೂ ಚಾ.ಸಾ **2** ರವರು ಸ್ಥಳಕ್ಕೆ ಬಂದು ನನ್ನನ್ನು ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆರೋಪಿ ನನ್ನ ಸಮವಸ್ತ್ರವನ್ನು ಹಿಡಿದು ಎಳೆದಾಡಿದ ಕಾರಣ ನನ್ನ ಶರ್ಟಿನ ಗುಂಡಿಗಳು ಕಿತ್ತು ಹೋಗಿದ್ದವು. ನಾನು ಆಸ್ಪತ್ರೆಯಲ್ಲೇ ಹೇಳಿಕೆಯನ್ನೂ ಕೊಟ್ಟೆನು. ಮಾರನೇ ದಿನ ಬೆಳಿಗ್ಗೆ ಮಧ್ಯಾಹ್ನ **11** ರಿಂದ **12** ಗಂಟೆ ಸಮಯದಲ್ಲಿ ಆಟೋ ಸ್ಟ್ಯಾಂಡಿನ ಮುಂಭಾಗ ಚಾ.ಸಾ **3** ಮತ್ತು **4** ರವರ ಸಮಕ್ಷಮ

ಪಂಚಾನಾಮೆ ಕ್ರಿಯೆ ಜರುಗಿಸಲಾಯಿತು. ಪಂಚನಾಮೆ ಕಾಲಕ್ಕೆ ಚಾ.ಸಾ 11 ರವರು ಉಪಸ್ಥಿತಸರಿದ್ದರು. ಪಂಚನಾಮೆ ಕ್ರಿಯೆಯನ್ನು ಛಾಯಾಚಿತ್ರಣ ಮಾಡಲಾಯಿತು. ಸಾಕ್ಷಿಗೆ ಪಂಚನಾಮೆಯೊಂದನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿ ತಮ್ಮ ಸಹಿ ಗುರುತಿಸಿದ ಮೇರೆಗೆ ಪಂಚನಾಮೆಯನ್ನು ನಿ.ಪಿ 2, ಸಾಕ್ಷಿಯ ಸಹಿಯನ್ನು ನಿ.ಪಿ 2 ಎ ಎಂದು ಗುರುತಿಸಲಾಯಿತು. ಸಾಕ್ಷಿ ತೆರೆದ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಈತನೇ ತನ್ನ ಮೇಲೆ ಹಲ್ಲೆ ಮಾಡಿದನೆಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಹೇಳಿಕೆಯೊಂದನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿ ತಮ್ಮ ಸಹಿ ಗುರುತಿಸಿದ ಮೇರೆಗೆ ಹೇಕೆಯನ್ನು ನಿ.ಪಿ 1, ಸಾಕ್ಷಿಯ ಸಹಿಯನ್ನು ನಿ.ಪಿ 1 ಎ ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ-</u> ಶ್ರೀ ಐ.ಎಲ್.ಎಸ್. ವಕೀಲರಿಂದ

ನಮ್ಮನ್ನು ಹಾಸನಕ್ಕೆ ನಿಯೋಜಿಸಬೇಕಾದರೆ ವಾರೆಂಟನ್ನು ಕೊಟ್ಟಿದ್ದರು ಎಂದರೆ ಸರಿ. ವಾರೆಂಟನ್ನು ದ್ವಿಪ್ರತಿಯಲ್ಲಿ ಕೊಟ್ಟಿದ್ದು ಒಂದನ್ನು ಕಂಡಕ್ಟರ್ ಇಟ್ಟುಕೊಂಡು ಮತ್ತೊಂದನ್ನು ನಮಗೆ ಹಿಂತಿರುಗಿಸಿ ಕೊಡುತ್ತಾರೆ ಎಂದರೆ ಸರಿ. ವಾರೆಂಟನ್ನು ಈ ಪ್ರಕರಣದಲ್ಲಿ ನಾನು ಕೊಟ್ಟಿಲ್ಲ. ನನ್ನನ್ನು ಸದರಿ ದಿನದಂದು ಕಿಟ್ ತರಲು ನಿಯೋಜಿಸಿಯೇ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಮೇಲೆ ಯಾವುದೇ ಹಲ್ಲೆಯೇ ಮಾಡಿಲ್ಲ ಎಂದರೆ ಸರಿಯಲ್ಲ. ಹರಿದು ಹೋದ ನಿಮ್ಮ ಸಮವಸ್ತ್ರವನ್ನು ನ್ಯಾಯಾಲಯಕ್ಕೆ ನೀಡಿದಿರೇ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ನಮ್ಮ ತನಿಖಾಧಿಕಾರಿಗಳನ್ನು ಅದನ್ನು ತೆಗೆದುಕೊಂಡಿದ್ದರು. ಸದರಿ ದಿನದಂದು ನಾನು ಸಮವಸ್ತ್ರದಲ್ಲಿ ಇರಲೇ ಇಲ್ಲ ಎಂದರೆ ಸರಿಯಲ್ಲ.

2. ಮೈಸೂರಿನ ಘಟಕದಿಂದ ಹಳ್ಳಿಮೈಸೂರಿನ ಘಟಕ ನಡೆದು ಹೋಗಬಹುದಾದ ಅಂತರದಲ್ಲಿತ್ತು ಎಂದರೆ ಸರಿ. ಸದರಿ ದಿನದಂದು ಆಟೋದಲ್ಲಿ ತುಂಬಿಕೊಂಡು ಹೋಗಬೇಕಾದಂತಹ ಪರಿಸ್ಥಿತಿಯೇ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ಪಂಚನಾಮೆ ಮಾಡಬೇಕಾದರೆ ಬಹಳಷ್ಟು ಮಂದಿ

ಆಟೋ ಚಾಲಕರಿದ್ದರು ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ 3-4 ಮಂದಿ ಇದ್ದರು ಎಂದು. ಸದರಿ 3-4 ಮಂದಿಯನ್ನೇ ನೀವು ಪಂಚರನ್ನಾಗಿ ಮಾಡಬಹುದಿತ್ತಲ್ಲವೇ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಹಿಂದಿನ ದಿನ ಅವರೇ ಪ್ರತ್ಯಕ್ಷ ಸಾಕ್ಷಿಗಳಾಗಿದ್ದರಿಂದ ಬೇರೆಯವರನ್ನು ಮಾಡುವ ಎಂದು ಬೇರೆಯವರನ್ನು ಪಂಚರನ್ನಾಗಿ ಮಾಡಿಕೊಂಡಿರುತ್ತೇವೆ. ಸಾಮಾನ್ಯವಾಗಿ ಸಮವಸ್ತ್ರದಲ್ಲಿರುವ ಪೊಲೀಸರ ಮೇಲೆ ಯಾರೂ ಹಲ್ಲೆ ಮಾಡುವುದಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಆ ದಿನ ಆರೋಪಿ ಮದ್ಯಪಾನ ಸೇವನೆ ಮಾಡಿದ್ದರು ಎಂದು. ಸದರಿ ದಿನದಂದು ಆರೋಪಿ ನನ್ನ ಯಾವುದೇ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಮಾಡಿದ ಸ್ಥಳದ ಪೂರ್ವಕ್ಕೆ ಬಸ್ ನಿಲ್ದಾಣ, ಪಶ್ಚಿಮಕ್ಕೆ ಸರ್ಕಾರಿ ಆಸ್ಪತ್ರೆ, ಉತ್ತರಕ್ಕೆ ಹಾಸನ ಕಡೆ ರಸ್ತೆ, ದಕ್ಷಿಣಕ್ಕೆ ಮೈಸೂರಿನ ಕಡೆ ರಸ್ತೆ ಇರುತ್ತದೆ. ಘಟನಾ ಸ್ಥಳದಿಂದ 10 ಅಡಿ ದೂರದಲ್ಲಿ ಪೂರ್ವಕ್ಕೆ ಬೈಕ್ ನಿಲ್ಲಿಸುವ ತಂಗುದಾಣವಿದೆ. ದಕ್ಷಿಣಕ್ಕೆ ಧ್ವಜ ಸ್ಥಂಭವೊಂದಿದ್ದು ಅಂಬೇಡ್ಕರ್ ಆಟೋ ನಿಲ್ದಾಣ ಎಂದು ಅದರ ಮೇಲೆ ನಮೂದಾಗಿದೆ. ಸದರಿ ದಿನದಂದು ಯಾವುದೇ ಗಲಾಟೆ ನಡೆದಿಲ್ಲ, ನನ್ನ ಮೇಲೆ ಯಾರೂ ಹಲ್ಲೆ ಮಾಡಿಲ್ಲ, ನನ್ನ ಕರ್ತವ್ಯಕ್ಕೆ ಯಾರೂ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕೃತ್ಯ ಎಸಗದಿದ್ದರೂ ಆತನಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ.

ಜೆ.ಎಂ.ಎಫ್.ಸಿ, ಹೊಳೆನರಸೀಪುರ.